# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.28/2025

Pw-02

Cw-02

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ನಿಂಗಪ್ಪ ಅಮರಾವತಿ |
| ತಂದೆಃಗಂಡನ ಹೆಸರುಃ | ಶ್ರೀ ರಾಮಪ್ಪ |
| ವಯಸ್ಸುಃ | 54 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಹಾರೋಗೊಪ್ಪ ತಾಃ ರಾಣೇಬೆನ್ನೂರು |

**ದಿನಾಂಕ:10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈಗ್ಗೆ 6-7 ತಿಂಗಳ ಹಿಂದೆ ನಮ್ಮೂರಿನ ಹನುಮಂತ ದೇವರ ಸರ್ಕಲ್ ಹತ್ತಿರ ಆರೋಪಿಗಳು ಪಿರ್ಯಾದಿಯೊಂದಿಗೆ ಜಗಳ ಮಾಡಿದ್ದರು. ಈ ವಿಚಾರವಾಗಿ ಪೊಲೀಸರು ಸದರಿ ಜಗಳ ಆದ 02 ದಿನಗಳ ನಂತರ ಸದರಿ ಘಟನಾ ಸ್ಥಳಕ್ಕೆ ಬಂದಿದ್ದರು. ಆಗ ನಾನು, ಚಾಸಾ-3-ಬಸವರಾಜ, ಚಾಸಾ-5-ವಿಜಯಕುಮಾರ, ಆರೋಪಿತರಿಂದ ಹೊಡೆಸಿಕೊಂಡ ಭರಮಪ್ಪ ಮತ್ತು ಇತರರು ಇದ್ದೆವು.

2. ಆಗ ಪೊಲೀಸರಿಗೆ ನಾವೆಲ್ಲರೂ ಇದೇ ಜಗಳ ಆದ ಜಾಗ ಎಂದು ತೋರಿಸಿದೆವು. ಆಗ ಪೊಲೀಸರು ಯಾವುದರಿಂದ ಹೊಡೆದಿರುತ್ತಾರೆ ಎಂದು ನಮ್ಮನ್ನು ಕೇಳಿದರು. ಆಗ 1 ನೇ ಆರೋಪಿಯು ಕಾಡು ಕಲ್ಲಿನಿಂದ ಪಿರ್ಯಾದಿಗೆ ಹೊಡೆದಿರುತ್ತಾನೆಂದು ತಿಳಿಸಿದೆವು. ಆಗ ಪೊಲೀಸರು ಸದರಿ ಕಲ್ಲನ್ನು ತೆಗೆದುಕೊಂಡು ಸ್ಥಳ ಪಂಚನಾಮೆ ಜರುಗಿಸಿ, ನನ್ನ ಸಹಿ ಪಡೆದುಕೊಂಡರು.

3. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ–6(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಪೋಟೋ ತೆಗೆದುಕೊಂಡಿರುತ್ತಾರೆ. ಪೊಲೀಸರು ತೆಗೆದ ಪೋಟೋವನ್ನು ಈಗ ನೋಡತ್ತಿದ್ದು, ಅದನ್ನು ಈಗಾಗಲೇ ನಿಪಿ–7 ಎಂದು ಗುರುತಿಸಲಾಗಿದೆ. ಆರೋಪಿತರು ಪಿರ್ಯಾದಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ಪೊಲೀಸರು ಕಲ್ಲನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದ ಕಾರಣ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.